


ರೇಡಿಯೊ. ಟಿ.ವಿ. ಬರುವವರೆಗೂ ಇದರದ್ದೇ ಪಾರುಪತ್ಯ. ಅದರಲ್ಲಿ ಬರುತ್ತಿದ್ದ ಬಿನಾಕ ಗೀತ್‌ಮಾಲ, ಕನ್ನಡ ಚಲನಚಿತ್ರದ ನೆಚ್ಚಿನ ಹಾಡುಗಳಿಂದ ಹಿಡಿದು ಕ್ರಿಕೆಟ್ ಕಾಮೆಂಟ್ರಿಯವರೆಗೆ ಕಿವಿಯಾಗುತ್ತಿದ್ದ ಜನಸಾಮಾನ್ಯರ ಮಟ್ಟಿಗೆ ಅದು ಮಾಯಾಪೆಟ್ಟಿಗೆಯಾಗಿತ್ತು.

## ರೇಡಿಯೊ ಧ್ಯಾನ

ಬೆಳಗಾವಿಯ ನಿಪ್ಪಾಣಿಯಲ್ಲಿ ಬಾಲ್ಯ ಕಳೆದ ಉದಯ ಕಲ್ಬುರ್ಗಿ ಅವರು ಊರಿನ ಬೀದಿಯಲ್ಲಿ, ಪಕ್ಕದ ಮನೆಯಲ್ಲಿ ರೇಡಿಯೊ ಕೇಳಿದರೆ ಮಂತ್ರಮುಗ್ಧರಂತೆ ನಿಲ್ಲುತ್ತಿದ್ದರಂತೆ. ಅದನ್ನು ತಯಾರಿಸುವ ಹುಚ್ಚು ಹಿಡಿದದ್ದು ಆಗಲೇ. ಬಳ್ಳಾರಿಯ ತಮ್ಮ ಅಜ್ಜಿಮನೆಗೆ ಬೇಸಿಗೆ ರಜೆಯಲ್ಲಿ ಹೋದಾಗ ಅಲ್ಲಿಯ ಮನೆಹೊರಗಿನ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಅಬ್ದುಲ್ ಸಾಬ್‌ಗೆ ಬೀಡಿಯ ಆಮಿಷ ತೋರಿಸಿ ಆತನಿಂದ ರೇಡಿಯೊ ತಯಾರಿಸುವುದನ್ನು ಕಲಿತರು. 1973ರಲ್ಲಿ ತಮ್ಮ 9ನೇ ವಯಸ್ಸಿನಲ್ಲಿಯೇ ಬ್ಯಾಟರಿ ಅಥವಾ ವಿದ್ಯುತ್ ಸಂಪರ್ಕವಿಲ್ಲದೆ ಕೇಳಬಹುದಾದ ಕ್ರಿಸ್ಟಲ್ ರೇಡಿಯೊ (Crystal Radio) ತಯಾರಿಸಿದ ಹೆಗ್ಗಳಿಕೆ ಇವರದ್ದು. ಜೊತೆಜೊತೆಗೆ ಸಾಧ್ಯವಿದ್ದ ಕಡೆಗೆಲ್ಲ ಹೋಗಿ ರೇಡಿಯೊ ದುರಸ್ತಿಯನ್ನು ಕಲಿತುಕೊಂಡರು. ಇವರ ರೇಡಿಯೊ ಧ್ಯಾನ ಎಷ್ಟಿತ್ತೆಂದರೆ ಹತ್ತನೆಯ ತರಗತಿಯಿಂದಲೇ ಅವುಗಳ ಸಂಗ್ರಹಕ್ಕೆ ತೊಡಗಿಕೊಂಡರು. 1938ರಲ್ಲಿದ್ದ ರೇಡಿಯೊಗಳಿಂದ ಈ ವರೆಗಿನ, ಹೆಚ್ಚಾಗಿ ವಿದೇಶಗಳ, ಈಗಲೂ ಕೇಳಬಹುದಾದ ರೇಡಿಯೊಗಳು ಇವರ ಸಂಗ್ರಹಾಲಯದಲ್ಲಿವೆ.




## ರೋಚಕ ಕತೆಗಳು

ಗುಜರಾತಿನ ರಾಜ್‌ಕೋಟ್ ರಾಜಮನೆತನದವರು 1947ರಲ್ಲಿ ವಿದೇಶಿ ದುಬಾರಿ ರೇಡಿಯೊ ಒಂದನ್ನು ಖರೀದಿಸುತ್ತಾರೆ. ಖರೀದಿಯಾದ ತಿಂಗಳೊಳಗೆ ಆ ಮನೆಯಲ್ಲಿ ಹಿರೀಕರೊಬ್ಬರ ಸಾವಾಗಿ ಆಸ್ತಿ ಪಾಲು ಮಾಡುತ್ತಾರೆ. ಹೀಗೆ ಪಾಲಾದಾಗ ರೇಡಿಯೊದಲ್ಲಿ ಆಸಕ್ತಿ ಇಲ್ಲದ ವ್ಯಕ್ತಿಗೆ ಅದು ದಕ್ಕುತ್ತದೆ. ಆ ಸಂದರ್ಭದಲ್ಲಿ ರೇಡಿಯೊ ಲೈಸನ್ಸ್ ಫೀಸು ಹತ್ತು ರೂಪಾಯಿ ಕಟ್ಟಲಾಗದೆ ಆ ರೇಡಿಯೊ ಹೊದಿಕೆಯೊಂದಿಗೆ ಬಂದ ರಟ್ಟಿನ ಡಬ್ಬದಲ್ಲಿಯೇ ಬಂಧಿಯಾಗುತ್ತದೆ. ಅದು ಹೇಗೋ ಉದಯ ಕಲ್ಬುರ್ಗಿ ಅವರು ಸಂಪರ್ಕಕ್ಕೆ ಸಿಗುತ್ತಾರೆ. ಅದನ್ನು ಹಣ ತೆತ್ತು ತಮ್ಮದಾಗಿಸಿಕೊಂಡಿದ್ದಾರೆ. ಕೇರಳದ ತಿರುವಾಂಕೂರು ರಾಜಮನೆತನದ ಜೊತೆ ಉದಯ ಅವರಿಗೆ ಆತ್ಮೀಯ ಗೆಳೆತನ. ಆ ಮನೆತನದ ಪದ್ಮನಾಭ ವರ್ಮಾ ಅವರು 1960ರ ಮಾಡಲ್‌ನ ರೇಡಿಯೊ ಒಂದನ್ನು ಇವರಿಗೆ ರಿಪೇರಿಗಾಗಿ ಕಳುಹಿಸಿಕೊಡುತ್ತಾರೆ. ರಿಪೇರಿಗಾದ ಖರ್ಚು ರೂಪಾಯಿ 50000. ದುರಸ್ತಿ ನಂತರ ಒಂದಿಷ್ಟು ದಿನ ರೇಡಿಯೊ ಕೇಳಿದ ಅವರು ಅದನ್ನು ಇವರಿಗೇ ಕೊಟ್ಟುಬಿಡುತ್ತಾರೆ. ಅದರ ನಂತರವೂ ಪದ್ಮನಾಭ ವರ್ಮಾರಿಂದ ಬಂದ ದುಬಾರಿ ರೇಡಿಯೊಗಳು ಇವರಲ್ಲಿವೆ.

ಇತ್ತೀಚೆಗೆ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗುತ್ತಾರೆ. ಅವರನ್ನು ಕಾಣಲು ಉದಯ ಕಲ್ಬುರ್ಗಿ ಹೋಗುತ್ತಾರೆ. ಅಲ್ಲಿ ಕೂತ ಮಹಿಳೆಯೊಬ್ಬರು ಇವರ ಪರಿಚಯದ ನಂತರು ತಮ್ಮ ಮನೆಯಲ್ಲಿಯೂ ಹಳೆಕಾಲದ ಬೃಹತ್ ಗಾತ್ರದ ರೇಡಿಯೊ ಒಂದಿದೆ, ಬೇಕಾದರೆ ತಗೊಂಡು ಹೋಗಿ ಅಂದರಂತೆ. ಅವರ ಮನೆಗೆ ಹೋಗಿ ತಗೊಂಡು ಬಂದರಂತೆ. ಹೀಗೆ ದೇಶದ ಬೇರೆ ಬೇರೆ ರಾಜ್ಯಗಳಿಂದ ನಾನಾ ವಿಧದಲ್ಲಿ ಸಂಗ್ರಹಿಸಿಕೊಂಡ ರೇಡಿಯೊಗಳನ್ನು ದುರಸ್ತಿಗೊಳಿಸಿ ಮೊದಲಿನಂತೆ ಚೊಕ್ಕವಾಗಿ ಚಕಚಕನೆ ಹೊಳೆಯುವಂತೆ ಮಾಡಿ ಕಾಪಿಡುವ ಕಲೆ ಉದಯ ಅವರಿಗೆ ಕರಗತವಾಗಿದೆ.

1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ನಿಯಮ ಮೀರಿ ಬಿತ್ತರಗೊಂಡ ಸುದ್ದಿಗೆ ಕಾರಣವಾದ ಉಷಾ ಮೆಹ್ತಾ ಅವರ 'ಸೀಕ್ರೆಟ್ ಕಾಂಗ್ರೆಸ್ ರೇಡಿಯೊ' ಅವರಲ್ಲಿರುವುದು ವಿಶೇಷ. ಈ ರೇಡಿಯೊ ಆಧಾರಿತ 'ಏ ವತನ್ ಮೇರೇ ವತನ್' ಎಂಬ ಬಾಲಿವುಡ್ ಚಿತ್ರ ತೆಗೆಯಲು ನಟಿ ಸಾರಾ ಅಲಿ ಖಾನ್ ಇವರ ಸಂಗ್ರಹಾಲಯಕ್ಕೆ ಬಂದು ಅದರ ಇತಿಹಾಸ ಕೇಳಿಸಿಕೊಂಡದ್ದು ಹೆಮ್ಮೆಯ ಸಂಗತಿ. ಕಣ್ಣನ್ ಅಯ್ಯರ್ ನಿರ್ದೇಶನದ ಈ ಚಿತ್ರದಲ್ಲಿ ಸಾರಾ ಅಲಿ ಖಾನ್ ಅವರು ಉಷಾ ಮೆಹ್ತಾರ ಪಾತ್ರವನ್ನು ನಿಭಾಯಿಸಿದ್ದರು.

